(ಇಂದು ದಿನಾಂಕ: 17-06-2023 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ :-**

ನಾನು ಮೆಡಿಕಲ್ ಶಾಪ್ ನಡೆಸುತ್ತೇನೆ. ವಾದಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಸಿ.ಹೆಚ್ ಪ್ರಸಾದ ಪರಿಚಯವಿರುತ್ತಾರೆ ಆದರೆ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನಾನು, ವಾದಿ, ಪ್ರತಿವಾದಿ ಹಾಗೂ ಸಿ.ಹೆಚ್. ಪ್ರಸಾದ ಆಂಧ್ರದ ಜನ ಎಂದರೆ ಸರಿ. ಹೀಗಾಗಿ ನಮ್ಮೆಲ್ಲರ ನಡುವೆ ಆತ್ಮೀಯತೆ ಇತ್ತು ಎಂದರೆ ಸರಿ. ಹೀಗಾಗಿ ನಮ್ಮಲ್ಲಿ ಆರ್ಥಿಕ ಸಂಕಷ್ಟ ಬಂದಾಗ ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನಮತ್ತು ಪ್ರತಿವಾದಿ ನಡುವೆ ಹಣದ ವ್ಯವಹಾರ ಇರಲಿಲ್ಲ. ನನ್ನ ಮತ್ತು ಪ್ರತಿವಾದಿ ಮಧ್ಯೆ ಹಣದ ವ್ಯವಹಾರ ಇದೆ ಎಂದು ತೋರಿಸಲು ದಾಖಲೆ ಇದೆ ಎಂದರೆ ಇಲ್ಲ. ಸಾಕ್ಷಿಗೆ ದಿನಾಂಕ: 26-11-2015 ರ ಖರೀದಿ ಕರಾರು ಪತ್ರ ತೋರಿಸಲಾಗಿ, ಅದರಲ್ಲಿ ತನ್ನ ಹೆಸರು ಹಾಗೂ ಸಹಿ ಇದೆ ಎಂದು ಸಾಕ್ಷಿ ಒಪ್ಪಿದ್ದು, ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ದಾಖಲೆಗೆ ವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.1 ರ ಮೇಲೆ ವಾದಿಯ ಸಹಿ ಇರುತ್ತದೆ. ನನ್ನ ಮತ್ತು ಪ್ರತಿವಾದಿ ಮಧ್ಯೆ ಖರೀದಿ ಕರಾರು ರದ್ದತಿ ಪತ್ರ ಸಹಾ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ: 22-12-2015 ರ ಖರೀದಿ ಕರಾರು ರದ್ದತಿ ಪತ್ರ ತೋರಿಸಲಾಗಿ, ಅದರಲ್ಲಿ ತನ್ನ ಹೆಸರು ಹಾಗೂ ಸಹಿ ಇದೆ ಎಂದು ಸಾಕ್ಷಿ ಒಪ್ಪಿದ್ದು, ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ನನ್ನ ಹಾಗು ಪ್ರತಿವಾದಿಯ ಮಧ್ಯೆ ಹಣದ ವ್ಯವಹಾರ ಇತ್ತು ಹಾಗಾಗಿ ನಾನು ಅವರ ಕಡೆಯಿಂದ ನಿ.ಡಿ.1 ರ ಪ್ರಕಾರ ಖರೀದಿ ಕರಾರು ಪತ್ರ ಮಾಡಿಕೊಂಡು ಅದನ್ನು ನಿ.ಡಿ.2 ರ ಪ್ರಕಾರ ರದ್ದುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ವಕೀಲರಾದ ಡಿ.ವೆಂಕಟೇಶ್ವರಲು ನನಗೆ ಬಹಳ ವರ್ಷಗಳಿಂದ ಪರಿಚಯ. ಏನಾದರೂ ಖರೀದಿ ಪತ್ರ ವ್ಯವಹಾರ ಇದ್ದಲ್ಲಿ ನಾನು ಫೋನ್ ಮುಖಾಂತರ ನಾನು ಹೇಳಿ ಮಾಡಿಸುತ್ತೇನೆಂದರೆ ಸರಿಯಲ್ಲ. ಡಿ.ವೆಂಕಟೇಶ್ವರಲು ಇವರ ಸಮಕ್ಷಮ ವಾದಿ ಮತ್ತು ಪ್ರತಿಯವಾದಿಯ ಮಧ್ಯೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸಾಕ್ಷಿಯು ನಡೆದಿದೆ, ಅವರೇ ದಸ್ತಾವೇಜು

ತಯಾರಿಸಿರುತ್ತಾರೆ. ವಾದಿ ಮತ್ತು ಪ್ರತಿಯವಾದಿಯ ಮಧ್ಯೆ ಹಣದ ವ್ಯವಹಾರ ಬಗ್ಗೆ ಡಿ.ವೆಂಕಟೇಶ್ವರಲು ಇವರಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ ಮತ್ತು ಸಿ.ಹೆಚ್. ಪ್ರಸಾದ ಮಧ್ಯೆ ಹಣದ ವ್ಯವಹಾರ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮತ್ತು ಸಿ.ಹೆಚ್. ಪ್ರಸಾದ ಮಧ್ಯೆ ಹಣದ ವ್ಯವಹಾರ ಇತ್ತು ಹಾಗಾಗಿ ಅವರು ಪ್ರತಿವಾದಿ ಕಡೆಯಿಂದ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದರು ಹಾಗೂ ನಾನು ಸದರಿ ಖರೀದಿ ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ: 18-11-2015 ರ ಖರೀದಿ ಕರಾರು ಪತ್ರ ತೋರಿಸಲಾಗಿ, ಅದು ಸಿ.ಹೆಚ್. ಪ್ರಸಾದ ಮತ್ತು ಪ್ರತಿವಾದಿ ಮಧ್ಯೆ ಆದ ಖರೀದಿ ಕರಾರು ಪತ್ರ ಎಂದು ಸಾಕ್ಷಿ ಒಪ್ಪಿದ್ದು, ಅದನ್ನು ನಿ.ಡಿ.3 ಎಂದು ಗುರುತಿಸಲಾಯಿತು. ನಿ.ಡಿ.3 ದಾಖಲೆಗೆ ವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.3 ರಲ್ಲಿ ವಾದಿಯ ಸಹಿ ಇರುತ್ತದೆ. ಪ್ರತಿವಾದಿ ಸದರಿ ಸಿ.ಹೆಚ್. ಪ್ರಸಾದ ಇವರಿಗೆ ಹಣ ಮರುಪಾವತಿ ಮಾಡಿದ ನಂತರ ಸದರಿಯವರು ಪ್ರತಿವಾದಿಗೆ ಖರೀದಿ ಕರಾರು ರದ್ದತಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ದಿನಾಂಕ: 26-11-2015 ರ ಖರೀದಿ ಕರಾರು ರದ್ದತಿ ಪತ್ರ ತೋರಿಸಲಾಗಿ, ಅದರಲ್ಲಿ ತನ್ನ ಸಹಿ ಇದೆ ಎಂದು ಸಾಕ್ಷಿ ಒಪ್ಪಿದ್ದು, ಅದನ್ನು ನಿ.ಡಿ.4 ಎಂದು ಗುರುತಿಸಲಾಯಿತು. ನಿ.ಡಿ.4 ದಾಖಲೆಗೆ ವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

4. ಪ್ರತಿವಾದಿ ಕಾಂಟ್ರ್ಯಾಕ್ಟರ್ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಗುತ್ತಿಗೆ ಕೆಲಸ ಮಾಡುವವರು ತಮಗೆ ಹಣ ಬೇಕಾದಾಗ ಬೇರೆಯವರ ಕಡೆಯಿಂದ ಹಣ ಪಡೆದು, ಭದ್ರತೆಗಾಗಿ ಖರೀದಿ ಕರಾರು ಪತ್ರ ಮಾಡಿಕೊಡುತ್ತಾರೆ ಹಾಗೂ ಅವರಿಗೆ ಬಿಲ್ ಹಣ ಬಂದ ನಂತರ ಅದನ್ನು ಕೊಟ್ಟು ಖರೀದಿ ಕರಾರು ಪತ್ರಗಳನ್ನು ರದ್ದುಪಡಿಸಿಕೊಳ್ಳುತ್ತಾರೆ ಎಂದರೆ ಸರಿ. ಪ್ರತಿವಾದಿ, ಸಿ.ಹೆಚ್.ಪ್ರಸಾದ, ನನ್ನ ಮತ್ತು ವಾದಿಯ ಹತ್ತಿರ ಹಣ ಪಡೆದುಕೊಳ್ಳುತ್ತಿದ್ದರು ಎಂದರೆ ನನ್ನ ಹತ್ತಿರ ಪಡೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ಮತ್ತು ಪ್ರತಿವಾದಿಯ ಮಧ್ಯೆ ಹಣದ ವ್ಯವಹಾರ ಆಗಿದ್ದು, ಅದರ ಭದ್ರತೆಗಾಗಿ ಪ್ರತಿವಾದಿ ಅವರಿಗೆ ನಿ.ಪಿ.1 ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ.

5. 2015 ಅಕ್ಟೋಬರ್ ಮೊದಲನೇ ವಾರದಲ್ಲಿ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದು, ಅವರು ವಾದಿಗೆ ಭೇಟಿಯಾಗಿ ರೂ.3 ಲಕ್ಷ ಸಾಲ ಕೊಡುವಂತೆ ಕೇಳಿದಾಗ ಅದಕ್ಕೆ ವಾದಿ ಅವರ ಹೆಂಡತಿ ಮತ್ತು ಮಗನ ಸಹಿ ಇರುವ 200 ರೂ. ಎರಡು ಸ್ಟ್ಯಾಂಪ್ ಪೇಪರ್, 5 ಸಹಿ ಮಾಡಿದ ಖಾಲಿ ಚೆಕ್ಕುಗಳು ಹಾಗೂ ದಾವಾ ಆಸ್ತಿಯ ಮೂಲ ದಾಖಲೆಗಳನ್ನು ಕೊಡಬೇಕು ಅದೇ ರೀತಿ ಖರೀದಿ ಕರಾರು ಪತ್ರವನ್ನು ಮಾಡಿಕೊಡಬೇಕು ಆಗ ರೂ.3 ಲಕ್ಷ ಸಾಲ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನನಗೆ ಗೊತ್ತಿಲ್ಲ. ದಿನಾಂಕ: 18-11-2015 ರಂದು ವಾದಿ NEFT ಮುಖಾಂತರ ತನ್ನ ಖಾತೆಯಿಂದ ಪ್ರತಿವಾದಿಯ ಖಾತೆಗೆ ರೂ.3 ಲಕ್ಷ ಜಮಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ: 30-11-2015 ರಂದು ಪ್ರತಿವಾದಿ ಸದರಿ ರೂ.3 ಲಕ್ಷ ಹಣವನ್ನು ವಾದಿಗೆ ಮರಳಿ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಅದಾದ ನಂತರ ಪ್ರತಿವಾದಿಯು ವಾದಿಗೆ ತಾನು ನೀಡಿರುವ ಖಾಲಿ ಸ್ಟ್ಯಾಂಪ್ ಪೇಪರ್ ಮತ್ತು ಖಾಲಿ ಚೆಕ್ಕುಗಳನ್ನು ವಾಪಸ್ಸು ಕೊಡು ಹಾಗೂ ಖರೀದಿ ರದ್ದತಿ ಪತ್ರವನ್ನು ಮಾಡಿಕೊಡುವಂತೆ ಕೇಳಿದರೂ ವಾದಿ ಕೇಳಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ ಒಂದಿಲ್ಲ ಒಂದು ಕಾರಣ ನೀಡುತ್ತಾ, ದಾಖಲೆಗಳನ್ನು ಕೊಡುವುದನ್ನು ಮುಂದೂಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಭದ್ರತೆಗಾಗಿ ಮಾಡಿಕೊಟ್ಟಿರುವ ಖರೀದಿ ಕರಾರು ಪತ್ರವನ್ನು ದುರ್ಬಳಕೆ ಮಾಡಿ ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ನಾನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>**ಮರುವಿಚಾರಣೆ: ಇಲ್ಲ :**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು